epaper - karnatakamalla.com

ಕರ್ನಾಟಕ ಮಲ್ಲ

# ಸೈಬರ್ ಅಪರಾಧ ತಡೆಗೆ ವ್ಯಾಪಕ ಜನಜಾಗೃತಿ ಅಗತ್ಯ- ಡಾ. ನಿವೇದಿತಾ ಶ್ರೇಯಾಂಶ್

ಮುಂಬಯಿ,ಅ.20 - ಡಿಜಿಟಲ್ ಯುಗವು ಸೈಬರ್ ಅಪರಾಧ ಮತ್ತು ಸೈಬರ್ ಕಿರುಕುಳದಂತಹ ಹೊಸ ಸವಾಲುಗಳನ್ನು ಎದುರಿಸುತ್ತಿದೆ. ಈ ಸವಾಲುಗಳು ಭಾರತದಲ್ಲಿ ಮತ್ತು ಪ್ರಪಂಚದಾದ್ಯಂತ ಪ್ರಮುಖ ಸಾಮಾಜಿಕ ಸಮಸ್ಯೆಗಳಾಗಿ ವೇಗವಾಗಿ ಹೊರಹೊಮ್ಮುತ್ತಿವೆ. ಇದರ ತಡೆಗೆ ವ್ಯಾಪಕ ಜನಜಾಗೃತಿ ಅಗತ್ಯ ಎಂದು ಖ್ಯಾತ ಶಿಕ್ಷಣ ತಜ್ಞೆ ಹಾಗೂ ಸೈಬರ್ ಅಪರಾಧ ತಡೆಗೆ ಕಾರ್ಯನಿರ್ವಹಿಸುತ್ತಿರುವ ಸಾಮಾಜಿಕ ಸಂಸ್ಥೆ ವಾಟ್ ನೌ (ಡಬ್ಲ್ಯುಎಚ್‌ಟಿ ನೌ) ನ ಸಹ-ಸಂಸ್ಥಾಪಕಿ ಕನ್ನಡತಿ ಡಾ. ನಿವೇದಿತಾ ಶ್ರೇಯಾಂಶ್ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಕಾನೂನು ಸಲಹಾ ಸಂಸ್ಥೆಯಲ್ಲಿ ಪ್ರಮುಖ ಹೆಸರಾದ ಎಯು (ಆಎ) ಕಾರ್ಪೊರೇಟ್ ಅಡ್ವೈಸರಿ ಮತ್ತು ಲೀಗಲ್ ಸರ್ವೀಸಸ್ (ಎಯುಸಿಎಲ್), ಹಾಗೂ ವಾಟ್ ನೌ ಸಂಸೆ ಜಂಟಿಯಾಗಿ ಬಾರತದಲಿ ಸೆ.ಬರ್ ಗುಂಡಾಗಿರಿಯ




ಕಪಿಮುಷ್ಠಿಯಲ್ಲಿ ಸಿಲುಕಿರುವ ಜನಸಾಮಾನ್ಯರ ಸಹಾಯಕ್ಕಾಗಿ ಪ್ರಮುಖ ಉಪಕ್ರಮವನ್ನು ಪ್ರಾರಂಭಿಸಿದೆ ಈ ನಿಮಿತ್ತ ಆಯೋಜಿಸಲಾದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡುತ್ತಿದ್ದರು.

ಈ ಸಂದರ್ಭದಲಿ ಮಾತನಾಡಿದ ಎಯು ಕಾರ್ಪೊರೇಟ್ ಸಲಹಾ ಮತ್ತು ಕಾನೂನು ಸೇವೆಗಳ ಸಂಸ್ಥಾಪಕ ಅಕ್ಷತ್ ಖೈತಾನ್,ಸಮಗ್ರ ಕಾನೂನು ಚೌಕಟ್ಟನ್ನು ರಚಿಸುವ ಮೂಲಕ, ಜಾಗೃತಿ ಮೂಡಿಸುವ ಮತ್ತು ಕಾನೂನು ಜಾರಿಯನ್ನು ಬಲಪಡಿಸುವ ಮೂಲಕ, ಭಾರತವು ಈ ಆನ್‌ಲೈನ್ ಬೆದರಿಕೆಗಳ ಹಾನಿಕಾರಕ ಪರಿಣಾಮಗಳನ್ನು ತಗ್ಗಿಸಲು ಪ್ರಾರಂಭಿಸಬಹುದು ಎಂದು ತಿಳಿಸಿದರು. ವಾಟ್ ನೌ ಸಂಸ್ಥಾಪಕಿ ಮತ್ತು ಮಾನವ ಹಕ್ಕುಗಳ ಕಾರ್ಯಕರ್ತೆ ನೀತಿ ಗೋಯಲ್ ಮಾತನಾಡಿ ಸೈಬರ್ ಅಪಾಯಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ , ಅಗತ್ಯವಿರುವ ಎಲ್ಲಾ ಸಹಾಯವನ್ನು ಒದಗಿಸುವ ಮೂಲಕ ಬಲಿಪಶುಗಳಿಗೆ ಬೆಂಬಲ ನೀಡುತ್ತೇವೆ ಎಂದು ಭರವಸೆ ನೀಡಿದರು. ಸೈಬರ್ ಸಮಸ್ಯೆಯಲ್ಲಿ ಸಿಲುಕಿದವರು ಹೆಲ್ಪ್ ಲೈನ್ ನಂಬರ್ 9019115115 ಗೆ ಸಂಪಕಿಸಬೇಕೆಂದು ಸಂಸೆ ಮವತಿಯಿಂದ ಅವಾ.ನಿಸಲಾಗಿದೆ.